326 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಿ.ಎ, ಬಿ.ಎಸ್ಸ್ಸಿ, ಬಿ. ಕಾಂ. ಕೊನೆಯ ವರ್ಷದ 1988 ಏಪ್ರಿಲ್ 1989 ಹಾಗೂ 1990 ಏಪ್ರಿಲ್ ಸಾಲಿನಲ್ಲಿ ಆದ ಪರೀಕ್ಷೆ ಫಲಿತಾಂಶಗಳ ಪ್ರಮಾಣ ಎಷ್ಟು?*

ಆ) *ಇದೇ ರೀತಿಯಲ್ಲಿ ಖಾಸಗಿ ಕಾಲೇಜುಗಳಲ್ಲಿನ ಪರೀಕ್ಷೆ ಫಲಿತಾಂಶಗಳ ಪ್ರಮಾಣ ಎಷ್ಟು?*

ಇ) *ಸರ್ಕಾರ ಪದವಿ ಕಾಲೇಜುಗಳಲ್ಲಿ ಖಾಸಗಿ ಕಾಲೇಜುಗಳಿಗಿಂತ ಪರೀಕ್ಷೆ ಫಲಿತಾಂಶಗಳು ಕಡಿಮೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಈ ಪರೀಕ್ಷೆ ಫಲಿತಾಂಶವನ್ನು ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು)

ಅ) ಅನುಬಂಧ ಲಗತ್ತಿಸಿದೆ

ಆ) ಅನುಬಂಧ ಲಗತ್ತಿಸಿದೆ

ಇ) ಗಮನಾರ್ಹವಾದ ವ್ಯತ್ಯಾಸವೇನೂ ಕಂಡು ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ನೆಲಮಂಗಲ ಕ್ಷೇತ್ರದ ಪಾಠ ಶಾಲೆಗಳ ಸಂಖ್ಯೆ

1146 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆಲಮಂಗಲ ಮತ ಕ್ಷೇತ್ರದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು, (ಹೋಬಳಿವಾರು ಹಾಗೂ ಗ್ರಾಮವಾರು ಮಾಹಿತಿಗಳನ್ನು ನೀಡುವುದು)*

ಆ) *ಈ ಮತ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳ ಮತ್ತು ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ನೆಲಮಂಗಲ ಮತ ಕ್ಷೇತ್ರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ : 71. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ -196

(ಮಂಡಲವಾರು ಪಟ್ಟಿಲಗತ್ತಿಸಿದೆ)

ಆ) ಬಂದಿದೆ.

ಇ) ಶಿಕ್ಷಕರು ಕೊರತೆ ಇರುವ ಶಾಲೆಗಳಿಗೆ ಪಕ್ಕದ ಶಾಲೆಗಳಿಂದ ಹೆಚ್ಚುವರಿ ಶಿಕ್ಷಕರನ್ನು ನಿಯೋಜನೆ ಮೇಲೆ ತುಂಬಿ ಸರಿದೂಗಿಸಲಾಗಿದೆ. ಹೆಚ್ಚುವರಿ ಶಿಕ್ಷಕರನ್ನು ಮತ್ತು ಕೊಠಡಿಗಳನ್ನು ಒದಗಿಸಲು ಕಪ್ಪು ಹಲಗೆ ಯೋಜನೆಯಲ್ಲಿ ಕ್ರಮಕೈಗೊಳ್ಳಲಾಗುವುದು.

		ಹಿರಿಯ ಪ್ರಾಥಮಿಕ ಶಾಲೆಗಳು	ಕಿರಿಯ ಪ್ರಾಥಮಿಕ ಶಾಲೆಗಳು	ಒಟ್ಟು
1.	ನೆಲಮಂಗಲ ನಗರ	07	05	12
2.	ಬಸವನಹಳ್ಳಿ ಮಂಡಳಿ	07	17	24
3.	ಎಂಟಗಾನಹಳ್ಳಿ ಮಂಡಳ	08	24	32
4.	ಟಿ. ಬೇಗೂರು ಮಂಡಳ	06	24	30
5.	ದೊಡ್ಡಬಿಲೆ ಮಂಡಳ	08	17	25
6.	ತ್ಯಾಮಗೊಂಡಲು ಮಂಡಳ	03	16	19
7.	ಮಣ್ಣೆ ಮಂಡಳ	05	19	24
8.	ಎಲೆ ಕ್ಯಾತನಹಳ್ಳಿ ಮಂಡಳ	08	15	23
9.	ಸೋಮಪುರ ಮಂಡಳ	07	19	26
10.	ಶಿವಗಂಗೆ ಮಂಡಳ	05	20	25
11.	ಕುಲವಾನಹಳ್ಳಿ ಮಂಡಳ	07	20	27
ಒಟ್ಟು		**71**	**196**	**267**

ಕ್ಯಾಪಿಟೇಷನ್ ಶುಲ್ಕದ ಬಗ್ಗೆ

1187 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸಲು ಒಪ್ಪಿದೆಯೆ?

ಆ) ಒಪ್ಪಿದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಒಪ್ಪಿದೆ

ಆ) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಯಾಪಿಟೇಷನ್ ಪದ್ಧತಿ) ಕಾಯ್ದೆ 1984 ನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯ ಪ್ರಕಾರ ದಿನಾಂಕ 11-7-88 ರಿಂದ ಯಾವುದೇ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳುವ ಹಾಗಿಲ್ಲ.

ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢ ಶಾಲೆಗಳ ಸಂಖ್ಯೆ

1155 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1987-88 ರಿಂದ 1991ರ ಜನವರಿ ಕೊನೆಯವರೆಗೂ ಮಂಜೂರು ಮಾಡಲಾಗಿರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳೆಷ್ಟು?